ಬಂದು ಬಿಟ್ಟಿದೆ. ಅದನ್ನು ಕೊಡುವುದಕ್ಕೆ ನಾವು ತಯಾರಾಗಿಲ್ಲ., as long as I am the Parliamentary Affairs Minister, I would like to make my point clear. Before the Committee was constituted, with the consent of the opposition, they moved the resolution; it was sent to the Joint Select Committee and the Government graciously accepted that. ಅವರು ಜಂಟಿ ಸಲಹಾ ಸಮಿತಿಯಲ್ಲಿ ಏನು ಮಾಡಿದ್ದಾರೆ ಎನ್ನುವದರ ಬಗ್ಗೆ ನಮಗೆ ಗೊತ್ತಿಲ್ಲ. ಅದನ್ನು ಇಲ್ಲಿ ಮಂಡಡನೆ ಮಾಡಿದ ಮೇಲೆ ಗೊತ್ತಾಗುತ್ತದೆ. ಸದನದ ಮುಂದೆ ಇಡುವುದದಕ್ಕಿಯೇ ಇವರು ಸಭಾತ್ಯಾಗ ಮಾಡುತ್ತೇವೆಂದರೆ, ಇವರಿಗೆ ಸಂವಿಧಾನದ ಬಗ್ಗೆ ಗೌರವ ಇಲ್ಲ. ನಾವು ಮಾಡಿಕೊಂಡಿರುವ ಶಾಸನದ ಬಗ್ಗೆ ಗೌರವ ಇಲ್ಲ, ನಾವು ದಿನನಿತ್ಯ ಸದನ ನಡೆಸಲು ಮಾಡಿಕೊಂಡಿರುವ ರೂಲ್ಸ್ ಅಂಡ್ ಪ್ರೊಸೀಜರ್ ಬಗ್ಗೆ ಇವರಿಗೆ ಗಮನವಿಲ್ಲ,, ಇದನ್ನು ನಾವು ಹೇಳದಿದ್ದರೆ, ಪ್ರತಿಪಕ್ಷದವರು ಹೇಳಿದ್ದೇ ಸರಿ ಎಂದು ರಾಜ್ಯದ ಜನರಿಗೆ ತಪ್ಪು ಕಲ್ಪನೆ ಬರುತ್ತದೆ. ಆದ್ದರಿಂದ ಇದು ಸದನದ ಹಕ್ಕು ಇದು ತಮ್ಮ ವ್ಯಾಪ್ತಿಯ ಇತಿಮಿತಿಯಲ್ಲಿ ಬರತಕ್ಕಂಥ ವಿಷಯ. ಇದನ್ನು ಇಲ್ಲಿಲೇ ಮಾಡುತ್ತಿದ್ದೇವೆಯೇ ಹೊರತು ಬಿಲ್ ಪಾಸ್ ಮಾಡಿಕೊಂಡು ಮನೆಗೆ ಹೋಗಿರುವುದಿಲ್ಲ. ಅವರು ಹೇಳಬೇಕಾಗಿದ್ದನ್ನು ಅವರು ಸಮಿತಿಯಲ್ಲಿ ಹೇಳಬಹುದು, ಸದನದಲ್ಲಿ ಈ ಜಂಟಿ ಸಲಹಾ ಸಮಿತಿ ವರದಿಯನ್ನು ಇಡುವುದಕ್ಕೆ ಅವಕಾಶವನ್ನು ಮಾಡಿಕೊಡಿ. ಜಂಟಿ ಸಲಹಾ ಸಮಿತಿಗೆ ಯಾರು ಹೋಗುತ್ತೀರಿ ಎನ್ನುವ ಬಗ್ಗೆ ಅವರ ವ್ಯಕ್ತಿಗತವಾದ ಅಭಿಪ್ರಾಯವನ್ನು ತೆಗೆದುಕೊಂಡು ನಂತರ ಅವರನ್ನು ಸಲಹಾ ಸಮಿತಿಯ ಸದಸ್ಯರನ್ನಾಗಿ ಮಾಡಿ ನಾವು ಅವರನ್ನು ಹಾಕಿರುತ್ತೇವೆ. ಸಮಿತಿಯಲ್ಲಿ ತಮಗೆ ಅನುಕೂಲವಾಗುವ ರೀತಿಯಲ್ಲಿ ವರದಿ ಬರಲಿಲ್ಲವೆಂದು ಬೇಕಾಬಿಟ್ಟಿಯಾಗಿ ರಾಜೀನಾಮೆ ಕೊಟ್ಟುಕೊಂಡು ವರದಿಯನ್ನು ಸದನದಲ್ಲಿ ಮಂಡಿಸಬೇಡಿ ಎಂದು ಹೇಳುವುದು ಇದೆಯಲ್ಲಾ, ಅದು ಸಂವಿಧಾನದ ಬಾಹೀರವಾಗುತ್ತದೆ. ಅದು ನಮ್ಮ ನಿಯಮಗಳಿಗೆ ಬಾಹಿರವಾಗುತ್ತದೆ. ಆದ್ದರಿಂದ ಇದನ್ನು ಸದನದಲ್ಲಿ ಮಂಡಿಸುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

4. ಅಧ್ಯಕ್ಷರ ತೀರ್ಪು

ಅಧ್ಯಕ್ಷರು :— ದಯಮಾಡಿ ಎಲ್ಲರೂ ಎರಡು ನಿಮಿಷ ಆಲಿಸಬೇಕು. 2000ನೇ ಸಾಲಿನ ಕರ್ನಾಟಕ ವಿಶ್ವವಿದ್ಯಾನಿಲಯದ ವಿಧೇಯಕವನ್ನು ಪರಿಶೀಲಿಸಿ ವರದಿಯನ್ನು ಸಲ್ಲಿಸಲು ರಚಿಸಿರುವ ಜಂಟಿ ಸಲಹಾ ಸಮಿತಿಯು ದಿನಾಂಕ 2, 20, ಜನವರಿ 2, 22 ಹಾಗೂ ಫೆಬ್ರವರಿ 16, 27ನೇ ಏಪ್ರಿಲ್, ಜೂನ್ 28 ಹಾಗೂ ಜುಲೈ 5 ಹಾಗೂ 16ನೇ ಜುಲೈ 2001 ರಲ್ಲಿ ಸಭೆಯನ್ನು ನಡೆಸಿ ವರದಿಯನ್ನು ಅಂತಿಮವಾಗಿ ಅಂಗೀಕರಿಸಿರುತ್ತೇವೆ. 10ನೇ ಹಾಗೂ 11ನೇ ಮೇ ತಿಂಗಳಲ್ಲಿ ಈ ಎರಡು

ದಿನಾಂಕಗಳಂದು ಜಂಟಿ ಪರಿಶೀಲನಾ ಸಮಿತಿಯು ನವ ದೆಹಲಿ ಹಾಗೂ ಆಂಧ್ರ ಪ್ರದೇಶಕ್ಕೆ ಭೇಟಿ ನೀಡಿ ಜವಹರ್‌ಲಾಲ್ ನೆಹರು ವಿಶ್ವವಿದ್ಯಾನಿಲಯದ ಉಪಕುಲಪತಿಗಳು ಇತರೆ ಅಧಿಕಾರಿಗಳು ಹಾಗೂ ವಿಶ್ವವಿದ್ಯಾನಿಲಯದ ಪ್ರಾಧಿಕಾರಿಗಳೊಂದಿಗೆ ಹಾಗೂ ಹೈದರಾಬಾದಿನ ಶಿಕ್ಷಣ ಸಚಿವರು ಹಾಗೂ ಶಿಕ್ಷಣ ಇಲಾಖೆಯ ಉನ್ನತ ಅಧಿಕಾರಿಗಳೊಂದಿಗೆ ಸಭೆಯನ್ನು ನಡೆಸಿರುತ್ತಾರೆ. ಜಂಟಿ ಪರಿಶೀಲನಾ ಸಮಿತಿಯು ಒಟ್ಟು 12 ಸಭೆಗಳನ್ನು ನಡೆಸಿರುತ್ತದೆ; ಜಂಟಿ ಪರಿಶೀಲನಾ ಸಮಿತಿಯ ಸದಸ್ಯರುಗಳಲ್ಲಿ, ಮಾನ್ಯ ವಿಧಾನಸಭೆಯ ಸದಸ್ಯರುಗಳಾದ ಶ್ರೀ ಎಸ್. ಸುರೇಶ್ ಕುಮಾರ್, ಹಾಗೂ ಶ್ರೀ ಎ. ರಾಮದಾಸ್ ಇವರು 2-7-2001 ರಂದು ಜಾರಿಗೆ ಬರುವಂತೆ ಹೊಸ ರಾಜೀನಾಮೆಗಳನ್ನು ಮಾನ್ಯ ಸಭಾಧ್ಯಕ್ಷರಿಗೆ ಸಲ್ಲಿಸಿರುತ್ತಾರೆ. ಕೌಲ್ ಅಂಡ್ ಶಕ್ಧರ್ ಪುಟ ಸಂಖ್ಯೆ: 666 ಸಂಸತ್ತಿನ ಕಾರ್ಯನಿರ್ವಹಣೆ ಹಾಗೂ ನಡವಳಿಕೆಗಳ ಪ್ರಕಾರ ಸಮಿತಿಯ ಸದಸ್ಯರುಗಳು ನೀಡಿರುವ ರಾಜೀನಾಮೆ ಸ್ಪಷ್ಟವಾಗಿರುವುದರಿಂದ ಹಾಗೂ ಯಾವುದೇ ಸಂದಿಗ್ಧಗಳೂ ಇಲ್ಲದಿರುವುದರಿಂದ ಸದರಿ ರಾಜೀನಾಮೆಗಳು ಈ ಕಾರ್ಯದಲ್ಲಿ ತಕ್ಷಣವೇ ರಾಜೀನಾಮೆಯನ್ನು ಅಂಗೀಕರಿಸಲಾಗಿದೆ. ಮಾನ್ಯ ಸದಸ್ಯರುಗಳಾದ ಶ್ರೀ ಸುರೇಶ್ ಕುಮಾರ್ ಹಾಗೂ ಶ್ರೀ ಎ. ರಾಮದಾಸ್ ಒಟ್ಟು 12 ಸಭೆಗಳಲ್ಲಿ 10 ಸಭೆಗಳಿಗೆ ಹಾಜರಾಗಿರುತ್ತಾರೆ. ಮೇಲಿನ ಹಾಜರಾತಿಯಲ್ಲಿ ತೋರಿಸಿರುವಂತೆ ಜಂಟಿ ಸಲಹಾ ಸಮಿತಿಯು ನವ ದೆಹಲಿ ಹಾಗೂ ಆಂಧ್ರ ಪ್ರದೇಶಕ್ಕೆ ಕೈಗೊಂಡ ಪ್ರವಾಸದಲ್ಲಿಯೂ ಕೂಡ ಇದ್ದಾರೆ. ದಿನಾಂಕ 6ನೇ ಜುಲೈ ನಡೆದ ಸಭೆಯಲ್ಲಿ, ಮಾನ್ಯ ಸದಸ್ಯರುಗಳಾದ ಶ್ರೀ ಸುರೇಶ್ ಕುಮಾರ್ ಹಾಗೂ ಶ್ರೀಕಾಮತ್ತುಸ್ವರವರು ಸಮಿತಿಯ ಸಭೆಗೆ ಹಾಜರಾಗಿ ನಿರ್ದೇಯಕಗಳ ಅಂಗೀಕಾರಕ್ಕೆ ಸಂಬಂಧಿಸಿದಂತೆ ವಿರೋಧವನ್ನು ವ್ಯಕ್ತಪಡಿಸಿ ಅಸಮ್ಮತಿಯ ಟಿಪ್ಪಣಿಯನ್ನು ಕೊಟ್ಟಿರುತ್ತಾರೆ, ಪ್ರತಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ. ಜಂಟಿ ಪರಿಶೀಲನಾ ಸಮಿತಿಯು 16-7-2001 ರಲ್ಲಿ ನಡೆದ ಸಭೆಯಲ್ಲಿ ವರದಿಯನ್ನು ಅಂಗೀಕರಿಸಲಾಗಿರುತ್ತದೆ. ಈ ಸಭೆಯಲ್ಲಿ, ಒಟ್ಟು 9 ಜನ ಸದಸ್ಯರುಗಳು ಹಾಜರಾಗಿದ್ದರು.

ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ, ಮಾನ್ಯ ಸದಸ್ಯರುಗಳು ಜಂಟಿ ಪರಿಶೀಲನಾ ಸಮಿತಿಯಲ್ಲಿ ಡಿಸೆಂಬರ್‌ಗೆ ಪೋಟನ್ನು ಕೊಟ್ಟಾಗಿರುತ್ತದೆ. ಅವರು ಅಲ್ಲಿ ಪುನ: ಅಪ್ಲೈನ್ ಮಾಡಿ ಹೋಗಿರುತ್ತಾರಲ್ಲಾ, ಅದು ತಪ್ಪು. ಈ ರೀತಿ ಮಾಡಿರುವುದು ತಪ್ಪಾಗಿರುತ್ತದೆ, ಅವು ಬೇಕಾಗಿದ್ದರೆ ಬಿಲ್ ಮೂವ್ ಮಾಡಿದಾಗ ಅವೆಲ್ಲವೂ ಅಲ್ಲಿಗೆ ತಲಪಬಹುದಾಗಿತ್ತು. ಏಕೆ ತಲಪಾಕಿದು? ಪ್ರತಿಯೊಂದನ್ನೂ ಸಭಾತ್ಯಾಗ ಮಾಡಿದರೆ I cannot understand the attitude of the Opposition. That is why, I request the Hon.Minister to place the report.

ಡಾ: ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) :— ಮಾನ್ಯ ಅಧ್ಯಕ್ಷರೆ, ನಾನು ವರದಿಯನ್ನು ಒಪ್ಪಿಸುವುದಕ್ಕೆ ಮುಂದೆ ಮಾನ್ಯ ಸಿಂಧ್ಯಾರವರು ಹಾಗೂ ಮಾನ್ಯ ವಿರೋಧಪಕ್ಷದ ನಾಯಕರು ಒಂದು ಆಪಾದನೆಯನ್ನು ಮಾಡಿರುತ್ತಾರೆ. ಅದು ರೆಕಾರ್ಡ್‌ಗೆ ಹೋಗಿದೆ, ರಾಜ್ಯದ ಜನತೆಗೆ ಹೋಗುತ್ತದೆ. ಅದನ್ನು ಕಡತದಿಂದ ತೆಗೆಸಬೇಕು, ಅದಕ್ಕೆ ನಾನು ಸ್ಪಷ್ಟೀಕರಣವನ್ನು ಕೊಡುತ್ತಿದ್ದೇನೆ. ಯಾರನ್ನೂ ನಾವು ಕೇಳದೆ, ಜಂಟಿ ಪರಿಶೀಲನಾ ಸಮಿತಿಯಲ್ಲಿ ವರದಿಯನ್ನು ಮಾಡಿದ್ದಾರೆಂಬ ಆಪಾದನೆಯನ್ನೂ ಕೂಡ ಮಾಡಿದ್ದಾರೆ. ನಾನು ಸದನದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಡಾ: ಡಿ.ಎಂ. ನಂಜುಂಡಪ್ಪನವರು ಛೇರ್ಮನ್, ಹೈಪವರ್ ಕಮಿಟಿ, ಆನ್ ರಿಡ್ರೆಸಲ್ ಅಂಡ್ ರೀಜನಲ್ ಇನ್‌ಬ್ಯಾಲೆನ್ಸ್ ಆಫ್ ಕರ್ನಾಟಕ, ಅವರು ವೈಸ್ ಚಾನ್ಸಲರ್‌ರಾಗಿದ್ದರು ಹಾಗೂ ಅನುಭವವುಳ್ಳವರಾಗಿರುತ್ತಾರೆ. ಶ್ರೀ ಸವದತ್ತಿಯವರೂ ಕೂಡ ವೈಸ್ ಚಾನ್ಸಲರ್‌ರಾಗಿದ್ದವರು ಮತ್ತು ವಿಶ್ವವಿದ್ಯಾನಿಲಯದ ಟೀಚರ್ಸ್ ಅಸೋಸಿಯೇಷನ್ ಅಧ್ಯಕ್ಷರಾದ ನರಹರಿಯವರು, ಮತ್ತು ಸಬಾಸ್ಟಿನ್ ಜೊಸೆಫ್, ಪ್ರೆಸಿಡೆಂಟ್, ಫೆಡರೇಷನ್ ಆಫ್ ಯೂನಿವರ್ಸಿಟಿ ಟೀಚರ್ಸ್ ಅಸೋಸಿಯೇಷನ್ ಡಾ: ಷಡಾಕ್ಷರಿಸ್ವಾಮಿ, ಪ್ರೆಸಿಡೆಂಟ್, ಜಗದ್ಗುರು ರೇಣುಕಾಚಾರ್ಯ ಎಜ್ಯುಕೇಷನ್ ಸೊಸೈಟಿ, ಪಟ್ಟಣಶೆಟ್ಟಿ, ಪ್ರೆಸಿಡೆಂಟ್, ಕರ್ನಾಟಕ ಸ್ಟೇಟ್, ಲೈಬ್ರರಿ ಅಸೋಸಿಯೇಷನ್, ಮತ್ತು ಇನ್ನಿತರ ಅನೇಕ ಜನರನ್ನು ಪತ್ರಿಕೆಗಳ ಮೂಲಕ ಪ್ರಕಟಣೆಯನ್ನು ಕೊಟ್ಟು ಯಾರಾದರೂ ಕೂಡ ಇದರ ಬಗ್ಗೆ ಮಾಹಿತಿಯನ್ನು ಕೊಡಬೇಕೆಂದು ಕೇಳಿ ನಾವು ಎಲ್ಲರ ಸಲಹೆಯನ್ನು ತೆಗೆದುಕೊಂಡು ಚರ್ಚೆಯನ್ನು ಮಾಡಿ ಇದನ್ನು ತಯಾರು ಮಾಡಿರುತ್ತೇವೆ. ಆದ್ದರಿಂದ ಇದು ಸತ್ಯಕ್ಕೆ ದೂರವಾದುದು ಎನ್ನುವ ಮಾತನ್ನು ಹೇಳಿ, 2000ನೇ ಸಾಲಿನ ಕರ್ನಾಟಕ ರಾಜ್ಯದ ವಿಶ್ವವಿದ್ಯಾನಿಲಯಗಳ ಜಂಟಿ ಪರಿಶೀಲನಾ ಸಮಿತಿಯ ವರದಿಯನ್ನು ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು :— ಕಾಂಗ್ರೇಸ್ಸೀಕರಣ ಎಂಬ ಪದವನ್ನು ಕಡತದಿಂದ ತೆಗೆಯಲಾಗಿದೆ. ಈಗ ವರದಿಯನ್ನು ಮಂಡಿಸಲಾಗಿದೆ. ಮಾನ್ಯ ಗೃಹ ಸಚಿವರು ನಿಮ್ಮ ಬೇಡಿಕೆಯನ್ನು ವಿಲೇ ಮಾಡಬೇಕು.

5. ವಿತ್ತೀಯ ಕಾರ್ಯಕಲಾಪಗಳು

2000-2001 ನೇ ಸಾಲಿನ ಬೇಡಿಕೆಗಳ ಮಂಡನೆ.

ಅಭಿಯಾಚನೆ ಕ್ರಮಾಂಕ 28 - ಬಂದೀಖಾನೆ, ಗೃಹ ರಕ್ಷಣಾದಳ, ನಾಗರೀಕ ರಕ್ಷಣೆ ಮತ್ತು ಸೈನಿಕರ ಕಲ್ಯಾಣ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :— ಮಾನ್ಯ ಅಧ್ಯಕ್ಷರೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಬಂದೀಖಾನೆ, ಗೃಹರಕ್ಷಣಾದಳ, ನಾಗರೀಕ ರಕ್ಷಣೆ ಮತ್ತು ಸೈನಿಕ